ಶ್ರೀ ರಾಜೇಂದ್ರ ವರ್ಮಾ:– ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅನೇಕ ವರ್ಷಗಳಿಂದ ನಮ್ಮ ರಾಜ್ಯದೊಳಗೆ....

ಅಧ್ಯಕ್ಷರು:– ಮಾತನಾಡುವುದರ ಬಗ್ಗೆ ನೀವು ನನಗೆ ಪತ್ರವನ್ನೇ ಕೊಟ್ಟಿಲ್ಲ. ಸುಮ್ಮನೆ ಈ ರೀತಿಯಾಗಿ ಮಾತನಾಡಿದರೆ ಹೇಗೆ? ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಆರೋಗ್ಯ ಮಂತ್ರಿಗಳು ಇದ್ದಾರೆಯೇ? ಅವರು ಇಲ್ಲ. ಮೆಡಿಕಲ್ ಎಜುಕೇಶನ್ ಮಿನಿಸ್ಟರ್‌ರವರು ಇಲ್ಲಿದ್ದಾರೆ. ಡಾ॥ ವಿ.ಎಸ್. ಆಚಾರ್ಯರವರೆ, ನಾನು ಈಗ ಹೇಳುವುದೇನೆಂದರೆ, ಇಲ್ಲಿ ಆರೋಗ್ಯ ಶಿಬಿರವನ್ನು ಏರ್ಪಡಿಸಲಾಗಿದೆ. ಇದು ನಾಳೆ ದಿವಸ ಕೊನೆಯಾಗಲಿದೆ. ಆದರೆ, ಬಹಳಷ್ಟು ಜನ ಸದಸ್ಯರು ಇನ್ನೂ ಕೂಡ ತಪಾಸಣೆ ಮಾಡಿಸಿಕೊಂಡಿಲ್ಲವೆಂದು ಕೇಳಿದ್ದೇನೆ. ಆದ್ದರಿಂದ, ನಾಡಿದ್ದೂ ಕೂಡ ಅಸೆಂಬ್ಲಿ ಇರುವುದರಿಂದ ಆರೋಗ್ಯ ಶಿಬಿರವನ್ನು ನಾಡಿದ್ದೂ ಸಹ ಮುಂದುವರಿಸಬೇಕೆಂದು ನಾನು ಸೂಚನೆ ಕೊಡುತ್ತಿದ್ದೇನೆ. ಅವರನ್ನು ಕರೆಸಿ ನಾಡಿದ್ದುವರೆಗೆ ಮುಂದುವರೆಸುವಂತೆ ಹೇಳಿ. ಈಗ ಪ್ರಶ್ನೋತ್ತರ ತೆಗೆದುಕೊಳ್ಳುತ್ತೇನೆ.

6. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

. ರಸ್ತೆ ಪ್ರದೇಶದಲ್ಲಿ ಭಿಕ್ಷಾಟನೆಯನ್ನು ತಡೆಗಟ್ಟುವುದು

196 (1097) ಶ್ರೀ ಗೋಪಾಲ ಕೃಷ್ಣ ಬೇಳೂರು ಬಿ.ಕೆ. :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಇತ್ತೀಚೆಗೆ ಬೆಂಗಳೂರು ನಗರದಲ್ಲಿ ರಸ್ತೆಯ ವೃತ್ತಗಳಲ್ಲಿ, ಸಿಗ್ನಲ್‌ಗಳಲ್ಲಿ ಇಜಡಾಗಳು ಹಾಗೂ ಭಿಕ್ಷುಕರು ಎಳೆಯ ಕೂಸುಗಳನ್ನು ಕರೆತಂದು ಸಾರ್ವಜನಿಕರು ಓಡಾಡುವ ಸ್ಥಳಗಳಲ್ಲಿ ವಾಹನ ನಿಲುಗಡೆಯ ಸ್ಥಳಗಳಲ್ಲಿ, ಭಿಕ್ಷಾಟನೆ ಮಾಡುವುದು ಹೆಚ್ಚಾಗಿರುವುದು ಹಾಗೂ ಸಾರ್ವಜನಿಕರೊಂದಿಗೆ ಅಸಭ್ಯವಾಗಿ ವರ್ತಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಭಿಕ್ಷಾಟನೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಾಲಚಂದ್ರ ಜಾರಕಿಹೊಳಿ (ಮಾನ್ಯ ಸಮಾಜ ಕಲ್ಯಾಣ ಸಚಿವರು)

(ಅ) ಹೌದು.

(ಆ) ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975ರ ಸೆಕ್ಷನ್ 3ರ ಪ್ರಕಾರ ರಾಜ್ಯದಲ್ಲಿ ಭಿಕ್ಷಾಟನೆಯನ್ನು ನಿಷೇಧಿಸಲಾಗಿದೆ. ಮಕ್ಕಳನ್ನು ಹೊರತುಪಡಿಸಿ (ಸದರಿ ಅಧಿನಿಯಮದಲ್ಲಿ ಪಾರಿಭಾಷಿಸಿದ್ದಂತೆ) ಯಾವುದೇ ವ್ಯಕ್ತಿಯು ಭಿಕ್ಷಾಟನೆಯಲ್ಲಿ ತೊಡಗಿದ್ದಲ್ಲಿ, ಸದರಿ ಅಧಿನಿಯಮದ ಸೆಕ್ಷನ್ 11 ಸಬ್-ಸೆಕ್ಷನ್1ರ ಅಡಿಯಲ್ಲಿ ಅಂತಹ ವ್ಯಕ್ತಿಗಳನ್ನು ಬಂಧಿಸಿ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ 1 ವರ್ಷಕ್ಕೆ ಕಡಿಮೆ ಇಲ್ಲದೇ ಆದರೆ 3 ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ನಿರಾಶ್ರಿತರ ಪರಿಹಾರ ಕೇಂದ್ರದ ರಕ್ಷಣೆಯಲ್ಲಿ ಇಡಲಾಗುತ್ತಿದೆ. ಆದರೂ ದಂಡಾಧಿಕಾರಿಗಳು ಬಂಧನದಲ್ಲಿಡಲು ಮಾಡಿದ ಆದೇಶವನ್ನು ಯಾವಾಗ ಬೇಕಾದರೂ ಮಾರ್ಪಾಡಿಸಲು ಅಥವಾ ರದ್ದುಪಡಿಸಲು ಅಧಿನಿಯಮದ ಸೆಕ್ಷನ್ 12 ಸಬ್-ಸೆಕ್ಷನ್ 2ರಲ್ಲಿ ಅವಕಾಶವಿರುತ್ತದೆ.

ಬೆಂಗಳೂರು ನಗರದಲ್ಲಿ ಭಿಕ್ಷಾಟನೆಯನ್ನು ತಡೆಗಟ್ಟಲು ಭಿಕ್ಷಾಟನೆ ನಿಷೇಧ ಅಧಿನಿಯಮದ ಪ್ರಕಾರ ಭಿಕ್ಷಾಟನೆಯಲ್ಲಿ ನಿರತರಾದ ಭಿಕ್ಷುಕರನ್ನು ಬಂಧಿಸಿ ಬೆಂಗಳೂರು ಉತ್ತರ ತಾಲ್ಲೂಕು ದಂಡಾಧಿಕಾರಿಗಳ ಮುಂದೆ ಹಾಜರುಪಡಿಸಲಾಗುವುದು, ದಂಡಾಧಿಕಾರಿಗಳವರ ಆದೇಶದ ಮೇರೆಗೆ ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ರಕ್ಷಣೆ ಒದಗಿಸಿ, ಉಚಿತ ಊಟ, ತಿಂಡಿ, ವಸತಿ, ಸಮವಸ್ತ್ರ, ಹಾಸಿಗೆ ಹೊದಿಕೆ, ಔಷಧೋಪಚಾರ ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ. ಪುನರ್ವಸತಿ ಕಾರ್ಯಕ್ರಮಗಳ ಅಡಿಯಲ್ಲಿ ವೃತ್ತಿ ತರಬೇತಿಗಳಾದ ಹೊಲಿಗೆ, ತೆಂಗಿನ ನಾರಿನ ಮ್ಯಾಟ್ ತಯಾರಿಕೆ, ಕಮ್ಮಾರಿಕೆ,ಬುಕ್ ಬೈಂಡಿಂಗ್, ಮರಗೆಲಸ, ಕೃಷಿ ಮತ್ತು ತೋಟಗಾರಿಕೆ, ಹೈನುಗಾರಿಕೆಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ದಿನಾಂಕ: 12-06-07ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಪರಿಣಾಮಕಾರಿಯಾಗಿ ಭಿಕ್ಷಾಟನೆ ತಡೆಗಟ್ಟುವ ಬಗ್ಗೆ ಸಂಬಂಧಪಟ್ಟ ಉನ್ನತ ಅಧಿಕಾರಿಗಳ ಸಭೆ ನಡೆದಿದೆ. ಸದರಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ತಂಡಗಳನ್ನು ರಚಿಸಿ ಬೆಂಗಳೂರು ನಗರದಲ್ಲಿ ಭಿಕ್ಷುಕರನ್ನು ಬಂಧಿಸಲಾಗುತ್ತಿದೆ.

ಶ್ರೀ ಬಿ.ಕೆ. ಗೋಪಾಲಕೃಷ್ಣ, (ಬೇಳೂರು):- ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಭಿಕ್ಷಾಟನೆ ಹೆಚ್ಚಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಮಾನ್ಯ ಸಚಿವರಲ್ಲಿ ಪ್ರಶ್ನೆ ಕೇಳಿದ್ದೆ. ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಇವತ್ತಿನ ದಿವಸ ಬೆಂಗಳೂರು

ನಗರದಲ್ಲಿರುವ ಸರ್ಕಲ್‌ಗಳಲ್ಲಿ 1, 2 ವರ್ಷ ವಯಸ್ಸಿನ ಮಕ್ಕಳನ್ನು ಇಟ್ಟುಕೊಂಡು ಕೆಲವು ಹೆಣ್ಣುಮಕ್ಕಳು ಭಿಕ್ಷೆಯನ್ನು ಬೇಡುತ್ತಿದ್ದಾರೆ. ಆ ಮಗು ಯಾವಾಗ ನೋಡಿದರೂ ನಿದ್ರಾವಸ್ಥೆಯಲ್ಲಿರುತ್ತದೆ. ಅಂದರೆ, ಯಾರದೋ ಮಗುವನ್ನು ತೆಗೆದುಕೊಂಡು ಬಂದು ಆ ಮಗುವಿಗೆ ನಿದ್ರೆ ಮಾತ್ರೆಯನ್ನು ಕೊಟ್ಟು ಭಿಕ್ಷೆಯನ್ನು ಮಾಡುತ್ತಿದ್ದಾರೆ. ಈ ರೀತಿಯಾಗಿ ಭಿಕ್ಷೆ ಮಾಡತಕ್ಕಂಥವರು ನಮ್ಮ ರಾಜ್ಯದವರಲ್ಲ. ಇವರು ಹಿಂದಿ ಭಾಷೆ ಮಾತನಾಡುವ ಹೊರ ರಾಜ್ಯದ ಹೆಣ್ಣುಮಕ್ಕಳಾಗಿದ್ದಾರೆ. ಅವರು ಮಕ್ಕಳನ್ನು ಇಟ್ಟುಕೊಂಡು ಭಿಕ್ಷೆಯನ್ನು ಮಾಡುವುದನ್ನು ನೋಡಿದರೆ ಬಹಳ ಬೇಸರವಾಗುತ್ತದೆ. ಪ್ರತಿಯೊಂದು ಸರ್ಕಲ್‌ನಲ್ಲಿ ಈ ರೀತಿಯಾದ ಭಿಕ್ಷಾಟನೆ ನಡೆಯುತ್ತಿದೆ. ಸಮಾಜ ಕಲ್ಯಾಣ ಇಲಾಖೆ ಅಥವಾ ಪೊಲೀಸ್ ಇಲಾಖೆಯಾಗಲಿ ಇವತ್ತಿನ ದಿವಸ ಈ ರೀತಿಯಾಗಿ ಮಾಡುವವರ ಮೇಲೆ ಯಾವುದೇ ರೀತಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ಇದರ ಜೊತೆಗೆ ಹಿಜಿಡಾಗಳು ಸರ್ಕಲ್‌ಗಳಲ್ಲಿ ಬಂದು ಅಸಭ್ಯವಾಗಿ ವರ್ತಿಸುತ್ತಾರೆ. ಬಹುಶಃ ನಾಗರೀಕರು ಯಾರು ಕೂಡ ಹೋಗುವುದಕ್ಕೆ ಆಗುವುದಿಲ್ಲಾ.ಆ ತರಹ ಆಗಬಾರದು. ಏಕೆಂದರೆ ಸರ್ಕಲ್‌ನಲ್ಲಿ ಬಂದು ನಾವು ಗಾಡಿಯಲ್ಲಿ ನಿಲ್ಲಿಸಿಬಿಟ್ಟರೆ ಸಾಕು ಹೀಗೆ ಕೈತಟ್ಟಿಬಿಟ್ಟು ಗಾಡಿಯೊಳಗೆ ಕೈಯನ್ನು ಹಾಕುತ್ತಾರೆ. ಇದೇನು ಅಸಹ್ಯ ಅಧ್ಯಕ್ಷರೆ, ಒಬ್ಬ ಶಾಸಕರು ಇರಬಹುದು, ಯಾರು ಹಿರಿಯ ವ್ಯಕ್ತಿಗಳು ಇರಬಹುದು, ಇದು ಸಮಾಜದಲ್ಲಿ ತಲೆಎತ್ತಿಕೊಂಡು ನಡೆಯುವಂತಹದ್ದಲ್ಲ. ಹಿಜಡಾಗಳ ಬಗ್ಗೆ ನಮಗೆ ಗೌರವವಿದೆ,

ಅಧ್ಯಕ್ಷರು: ತಾವು ಪ್ರಶ್ನೆಯನ್ನು ಕೇಳಿ ಸುಮ್ಮನೆ ಭಾಷಣ ಮಾಡುವುದಕ್ಕೆ ನಿಂತುಬಿಟ್ಟಿದ್ದಿರಲ್ಲಾ ?

ಶ್ರೀ ಗೋಪಾಲಕೃಷ್ಣ ಬೇಳೂರು: ಇವತ್ತು ಸಮಾಜದಲ್ಲಿ 21ನೇ ಶತಮಾನದಲ್ಲಿ ನಾವು ಈ ತರಹ ನಡೆಯುತ್ತಿರುವುದನ್ನು ನೋಡಿದಾಗ ಬಹಳ ಬೇಜಾರು ಆಗುತ್ತಿದೆ. ಆದರೆ ಈ ಬಗ್ಗೆ ಅಧಿಕಾರಿಗಳು ಇರಬಹುದು ಅಥವಾ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಕೂಡ ಇರಬಹುದು, ಕ್ರಮ ತೆಗೆದುಕೊಳ್ಳಬೇಕು. ಈ ಪದ್ಧತಿ ಇರಬಾರದು. ಇವತ್ತು ಹೆಣ್ಣುಮಕ್ಕಳು ಭಿಕ್ಷೆ ಬೇಡುವಂತಹದ್ದು. ಹಿಜಡಾಗಳು ಅಸಹ್ಯವಾಗಿ ವರ್ತಿಸುವುದು ಈ ರಾಜ್ಯದಲ್ಲಿ ಇರಬಾರದು. ನಮ್ಮ ಬೆಂಗಳೂರು ಸಿಟಿಯಲ್ಲಿ ಈ ತರಹ ನಡೆಯುತ್ತಿದೆ. ಅದನ್ನು ಕಂಟ್ರೋಲ್ ಮಾಡಬೇಕೆಂದು ಹೇಳಿ, ತಮ್ಮಲ್ಲಿ ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಲ ಜಾರಕಿಹೊಳಿ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ಭಿಕ್ಷಾಟನೆ ಬೆಂಗಳೂರು ನಗರದಲ್ಲಿ ಸರ್ಕಲ್‌ಗಳಲ್ಲಿ ಜಾಸ್ತಿಯಾಗಿದೆ ಎಂದು ಹೇಳಿ ಗಮನಕ್ಕೆ ತಂದಿದ್ದಾರೆ. ಈಗಾಗಲೇ ಸಮಾಜಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಒಂದು ಸಭೆಯನ್ನು ಮಾಡಿದ್ದಾರೆ. ಅದರ ಜೊತೆಗೆ ಜೂನ್ ಅಂತ್ಯದೊಳಗೆ 320 ಭಿಕ್ಷುಕರನ್ನು ಗುರುತಿಸಿದ್ದಾರೆ. ಈಗಾಗಲೇ ಭಿಕ್ಷುಕ ಪರಿಹಾರ ಕೇಂದ್ರಗಳಲ್ಲಿ Beggars colony ಯಲ್ಲಿಟ್ಟವರಿಗೆ, ಅದನ್ನು ಬಿಡಿಸಿ ಅವರಿಗೆ ಬೇರೆ ಏನು ಕೆಲಸವನ್ನು ಕೊಡಬೇಕೆಂದು ಸಾಕಷ್ಟು ಪ್ರಯತ್ನವನ್ನು ಮಾಡುತ್ತಿದ್ದಾರೆ. ಅವರನ್ನು ಬಂಧನ ಮಾಡುವ ಸಮಯದಲ್ಲಿ ಲಾಯರ್ ಮುಖಾಂತರ ಅವರು ಬಿಡುಗಡೆಯಾಗುವ ದಿಸೆಯಲ್ಲಿ ಶ್ರೀಮಂತರ ಹತ್ತಿರ ಕೆಲಸವನ್ನು ಮಾಡುವುದಕ್ಕೆ ಶುರು ಮಾಡಿದ್ದಾರೆ. ನಾನು ಅತೀ ಶೀಘ್ರದಲ್ಲಿ ಅಧಿಕಾರಿಗಳ ಜೊತೆ ಈ ಬಗ್ಗೆ ಚರ್ಚೆಯನ್ನು ಮಾಡಿದಾಗ ಈಗ 15–20 ದಿವಸಗಳಲ್ಲಿ ಜಾಸ್ತಿಯಾಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ನಮ್ಮ ಅಧಿಕಾರಿಗಳು ಸೇರಿ ಇದನ್ನು ಅತಿ ಶೀಘ್ರದಲ್ಲಿ ಕಂಟ್ರೋಲ್ ಮಾಡುತ್ತೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ವಾಟಾಳ್ ನಾಗರಾಜು:– ನೀವು ಬಂಧನ ಮಾಡುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಅವರ ಜೀವನ ನಡೆಸುವುದಕ್ಕೆ ವ್ಯವಸ್ಥೆ, ಏನೋ ದುರ್ದೈವ ಅವರು ಹಾಗೆ ಆಗಿರುತ್ತಾರೆ. ನಾವು ಅವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವ ಬಗ್ಗೆ ನೋಡಬೇಕೇ ಹೊರತು ವ್ಯಾನ್ ತಂದು ಅವರನ್ನು ಅರೆಸ್ಟ್ ಮಾಡಿಸಿ ಜೈಲಿಗೆ ತಳ್ಳಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ಅವರ ಸಮಸ್ಯೆ ಬಗೆಹರಿಯಬೇಕಾದರೆ ಅವರ ಜೀವನ ಏನು? ಪರಿಸ್ಥಿತಿ ಏನು? ಸಮಾಜದಲ್ಲಿ ಅವರನ್ನು ಯಾವ ರೀತಿಯಾಗಿ ಕಾಣುತ್ತಿದ್ದೇವೆ, ಅತ್ಯಂತ ಕಟ್ಟಕಡೆಯ ಜನರು ಎಂದು ಕಾಣುತ್ತಿದ್ದೇವೆ. ಸಮಾಜದಲ್ಲಿ ಅವರಿಗೆ ಸಮಾನತೆಯನ್ನು ಕೊಡುವಂತ ವ್ಯವಸ್ಥೆ ಇವೆಲ್ಲವನ್ನು ತಾವು ಮಾಡಬೇಕು. ಪೊಲೀಸ್ ವ್ಯಾನ್ ಇದ್ದೇ ಇರುತ್ತದೆ. ಅದು ಇರುವುದರಿಂದ ತಾವು ಅವರನ್ನು ಬಂಧನ ಮಾಡುತ್ತೀರಿ. ಅದರಿಂದ ಏನು ಪ್ರಯೋಜನವಾಗುವುದಿಲ್ಲ.

ಶ್ರೀ ಎಂ. ಮಹದೇವ: ಬಹಳ ಪ್ರಸ್ತುತವಾದಂತಹ ವಿಚಾರವನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ. ಬೆಂಗಳೂರಿನಲ್ಲಿ ಓಡಾಡುವಂತಹ ಎಲ್ಲರಿಗೂ ಒಂದು ದೊಡ್ಡ ಹಾವಳಿಯಾಗಿದೆ. ಆ ಮಕ್ಕಳಿಗೆ ಅವರು ಏನೋ ಕುಡಿಸಿ ಡ್ರಗ್ ಮಾಡುತ್ತಾರೆ. ಆ ಮಕ್ಕಳು ಕೂಡ

ಅರೆಪ್ರಜ್ಞಾವಸ್ಥೆಯಲ್ಲಿರುತ್ತಾರೆ. ಇವತ್ತು ಒಂದು Beggars Relief Home, Beggars Remand Home ಎಂದು ಏನೋ ಇದೆ. ಅದು ಏನು ಕೆಲಸವನ್ನು ಮಾಡುತ್ತಿದೆ ಎಂದು ನಮಗೆ ಗೊತ್ತಾಗಬೇಕು. ಇವರನ್ನು ತೆಗೆದುಕೊಂಡು ಹೊಗಿ ಸುಮಾರು 60–70 ಎಕರೆ ಜಾಗದಲ್ಲಿ ಮಾಗಡಿರೋಡ್‌ನಲ್ಲಿ ಒಂದು ದೊಡ್ಡ Beggars Relief Center ಎಂದು ಇದೆ. Beggars Colony ಎಂದು ಇದೆ. ಆ ಕಾಲೋನಿಯಲ್ಲಿರುವವರು ಏನು ಕೆಲಸವನ್ನು ಮಾಡುತ್ತಿದ್ದಾರೆ? ಬರೀ 5–6 ಪ್ರಮುಖವಾದ ಸರ್ಕಲ್‌ಗಳಲ್ಲಿ ಬಂದು ಹಿಡಿದುಕೊಂಡು ಹೋದರೆ ಸಾಕು, ಸುಮಾರು ನೂರಾರು ಜನರು ಸಿಗುತ್ತಾರೆ. ನಿಮಗೆ ಪೊಲೀಸ್ ಅಗತ್ಯವಿಲ್ಲ. ದಯವಿಟ್ಟು ತಾವು ಆ ವಿಚಾರದಲ್ಲಿ ಬೆಳಕನ್ನು ಚೆಲ್ಲಬೇಕು.

ಶ್ರೀ ಬಾಲಚಂದ್ರ ಲ ಜಾರಕಿಹೊಳಿ:– ಈಗಾಗಲೇ ಅವರನ್ನು ಹಿಡಿದು ಅರೆಸ್ಟ್ ಮಾಡುವಂತಹ ಕೆಲಸವಲ್ಲ ಎಂದು ಹೇಳಿದರು. ನಾವು ಅವರನ್ನು ಹಿಡಿದು Beggars colonyಯಲ್ಲಿ ಅವರ ಹತ್ತಿರ ಬೇರೆ ಬೇರೆ ರೀತಿಯ ಕಸುಬನ್ನು ಮಾಡಿಸುವ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ಅದು agriculture ಇರಬಹುದು, ಅವರ ಕಡೆಯಿಂದ ಬೇರೆ ಕೆಲಸಗಳನ್ನು ಮಾಡಿಸುತ್ತಿದ್ದೇವೆ. ಅವರು ಆ ಕೆಲಸವನ್ನು ಬಿಟ್ಟು ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುತ್ತಾರೆಂದಾಗ ಅವರನ್ನು ನಾವು ರಿಲೀಸ್ ಕೂಡ ಮಾಡುತ್ತಿದ್ದೇವೆ. ಆದರೆ ತಾವು ಕೊಟ್ಟಂತಹ ಸಲಹೆಯನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಅವರಿಗೆ ಬೇರೆ ಏನಾದರೂ ಕೆಲಸವನ್ನು ಕೊಡಿಸಬೇಕು.

ಶ್ರೀ ಎಂ.ಟಿ. ಬಿ ನಾಗರಾಜು: ತಾವು ಅವರನ್ನು ಮುಂದೊಂದು ದಿನ ಬಂಧಿಸಿದ್ದೀರಿ. ಸಿಗ್ನಲ್‌ಗಳಲ್ಲಿ ಅವರುಗಳು ಭಿಕ್ಷೆಯನ್ನು ಬೇಡಲು ಬರುತ್ತಿರುವುದರಿಂದ ದೊಡ್ಡ ಆಕ್ಸಿಡೆಂಟ್‌ಗಳು ಆಗುತ್ತಿರುತ್ತದೆ. ಇವತ್ತು ನಾವು ಬರುತ್ತಿರುವಂತಹ ಸಂದರ್ಭದಲ್ಲಿ ಭಿಕ್ಷೆ ಬೇಡುತ್ತಿರುವವರನ್ನು ನಾವು ನೋಡುತ್ತಿದ್ದೇವೆ. ದಯಮಾಡಿ ತಾವು ಇದನ್ನು ನಿಯಂತ್ರಣ ಮಾಡಬೇಕು. ಇದರ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ತಾವು ನೀಡಬೇಕು.

ಅಧ್ಯಕ್ಷರು: ಆಯಿತು. ತಾವು ಕುಳಿತುಕೊಳ್ಳಿ. ಒಂದು ಪ್ರಶ್ನೆಗೆ ತಾವುಗಳು ಎಷ್ಟು ಉಪಪ್ರಶ್ನೆಯನ್ನು ಕೇಳುತ್ತೀರಿ. ತಮಗೆ ಎಷ್ಟು ಹೇಳಿದರೂ ಅಷ್ಟೇ.

ಡಾ॥ ಹೆಚ್.ಸಿ. ಮಹದೇವಪ್ಪ: ಅವರು ಭಯ ಹುಟ್ಟಿಸುವಂತಹುದಕ್ಕಿಂತ ಹೆಚ್ಚಾಗಿ ಗಟ್ಟಿ ಮುಟ್ಟಾಗಿದ್ದಾರೆ. ಅವರು ಬದುಕುವುದಕ್ಕೆ ಆರ್ಥಿಕವಾದ ಕಾರ್ಯಕ್ರಮಗಳನ್ನು ಕೊಟ್ಟು

ಅವರು ದುಡಿದು ಮೇಲೆ ಬಂದು ಸಮಾಜಕ್ಕೆ ಹೊರೆಯಾಗುವ ರೀತಿಯಲ್ಲಿ ಸ್ವತಂತ್ರ ಜೀವನ ಮಾಡುವುದಕ್ಕೆ ಈ ಇಲಾಖೆ ಒಂದು ಕಾರ್ಯಕ್ರಮವನ್ನು ರೂಪಿಸಬೇಕು. ನಾನಾ ಇಲಾಖೆಗಳು ಸೇರಿ ಒಂದು comprehensive programme ಅನ್ನು ಮಾಡಿ ಅವರು ಬದುಕುವುದಕ್ಕೆ ಕಾಲಾವಕಾಶಗಳನ್ನು ಕೊಡುವುದಕ್ಕೆ ತಕ್ಷಣ ಒಂದು ನಾಲ್ಕೈದು ಇಲಾಖೆಗಳು ಹಣಕಾಸಿನ ಇಲಾಖೆಯವರ ಜೊತೆಯಲ್ಲಿ ಸೇರಿ ಸಭೆಯನ್ನು ಮಾಡಿ ಅವರು ಬದುಕುವಂತಹ ವಾತಾವರಣವನ್ನು ಸ್ವತಂತ್ರವಾಗಿ ನಿರ್ಮಾಣ ಮಾಡಬೇಕು.

ಶ್ರೀ ಬಾಲಚಂದ್ರ ಲ ಜಾರಕಿಹೊಳಿ: ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ. ಈ ಸಲಹೆಯನ್ನು ಸರ್ಕಾರವು ಗಂಭೀರವಾಗಿ ತೆಗೆದುಕೊಂಡು ಅದು ಹಣಕಾಸು ಇಲಾಖೆ ಇರಬಹುದು, ಬೇರೆ ಬೇರೆ ಇಲಾಖೆಗಳ ಜೊತೆಯಲ್ಲಿ ಚರ್ಚೆ ಮಾಡಿ, ಅವರ ಉಪಜೀವನಕ್ಕೆ ಏನು ಮಾಡಬೇಕು, ಅದನ್ನು ಸರ್ಕಾರ ಖಂಡಿತವಾಗಿ ಮಾಡುತ್ತದೆಂದು ನಾನು ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಶ್ರೀಮತಿ ಭಾಗೀರಥಿ ಮರುಳ ಸಿದ್ದನಗೌಡ ತಾವು ಪ್ರಶ್ನೆಯನ್ನು ಕೇಳಿ.

ಕೊಟ್ಟೂರು ಮತಕ್ಷೇತ್ರದ ಸಾರ್ವಜನಿಕ ಆಸ್ಪತ್ರೆಗಳಲ್ಲಿರುವ ಸಿಬ್ಬಂದಿಗಳ ಕೊರತೆಯ ಬಗ್ಗೆ.

197 (1269) ಶ್ರೀಮತಿ ಭಾಗೀರಥಿ ಟಿ. (ಕೊಟ್ಟೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬಳ್ಳಾರಿ ಜಿಲ್ಲೆ ಕೂಡ್ಲಗಿ ತಾಲ್ಲೂಕು ಕೊಟ್ಟೂರು ಮತಕ್ಷೇತ್ರದ ಆಸ್ಪತ್ರೆಗಳಲ್ಲಿ (ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ) ಸಿಬ್ಬಂದಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

(ಇ) ಈ ಮತಕ್ಷೇತ್ರದಲ್ಲಿ ಸಿಬ್ಬಂದಿಗಳ ವಸತಿ ಗೃಹ ಕಟ್ಟಡಗಳು ಪ್ರಾರಂಭಗೊಂಡಿದ್ದು, ಹಣದ ಕೊರತೆಯಿಂದಾಗಿ ಅಪೂರ್ಣಗೊಂಡಿರುವುದರಿಂದ ಇವುಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್. ಅಶೋಕ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಅ) ಬಂದಿದೆ.